ಅಸಲು ದಾವಾ ಸಂಖ್ಯೆ.26/2020
ಡಿ.ಡಬ್ಲ್ಯು:2 / ನಂಜಪ್ಪ

**ದಿನಾಂಕ 16.02.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲು : ಶ್ರೀ ಎಂ.ಕೆ.ಎ. ವಾದಿ ಪರ ವಕೀಲರಿಂದ</u>**

ನಾನು 2 ನೇ ಪ್ರತಿವಾದಿ ಪರ ಸಾಕ್ಷ್ಯ ನುಡಿಯುತ್ತಿದ್ದೇನೆ. ದಾವಾ ಸ್ವತ್ತಿನ ಆಜುಬಾಜಿನಲ್ಲಿ ನನ್ನ ಸ್ವತ್ತು ಇರುವುದಿಲ್ಲ. ದಾವಾ ಸ್ವತ್ತಿನ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ವೆಂಕಟರಾಯಪ್ಪರವರ ಸ್ವತ್ತು, ಪಶ್ಚಿಮಕ್ಕೆ – ಪೂಜಾರಿ ನಾರಾಯಣಪ್ಪರವರ ಸ್ವತ್ತು, ಉತ್ತರಕ್ಕೆ – ವೆಂಕಟಲಕ್ಷ್ಮಮ್ಮರವರ ಸ್ವತ್ತು ಮತ್ತು ದಕ್ಷಿಣಕ್ಕೆ – ಎನ್. ನಾರಾಯಣಪ್ಪರವರ ಸ್ವತ್ತು ಇದೆ ಎಂದು ನನಗೆ 2 ನೇ ಪ್ರತಿವಾದಿ ತಿಳಿಸಿದ್ದಾರೆ. 2 ನೇ ಪ್ರತಿವಾದಿ ತಿಳಿಸಿದ್ದನ್ನು ನಾನು ನುಡಿಯುತ್ತಿದ್ದೇನೆ. ದಾವಾ ಸ್ವತ್ತಿನಲ್ಲಿ ಏನು ಬೆಳೆ ಇಟ್ಟಿದ್ದಾರೆ ಎಂದರೆ ಗೊತ್ತಿಲ್ಲ.

ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಉಳುಮೆ ಮಾಡಿ, ಬೆಳೆ ಇಡುತ್ತಿರುವ ಬಗ್ಗೆ ನಿಮಗೆ ಹೇಗೆ ಗೊತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣ 0.11 ಗುಂಟೆ. ಸದರಿ ಸ್ವತ್ತನ್ನು ವಾದಿಯು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ವಾದಿಯು ಆಲೂಗಡ್ಡೆ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ. ನನಗೆ ಏನೂ ತಿಳಿಯದಿದ್ದರೂ ಸಹ ಪ್ರತಿವಾದಿಯ ಪರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.